# ಗುಣಸಂಪನ್ನ ನೇರಿದ ರತ್ನ ಸಿಂಹಾಸನವ

ಧರ್ಮರಾಯನೇ ಕೇಳು. ಪುಷ್ಕರನು ಅರಮನೆಗೆ ಬಂದು ಹೆಚ್ಚಿನ ಆಯುಧಗಳನ್ನು ತರಿಸಿದನು. ಯುದ್ಧ ವೀರರನ್ನು ಕರೆದು ಬಿಲ್ಲು ಬಾಣಗಳನ್ನು ನೀಡಿದನು. ಆನೆ, ಕುದುರೆ, ಕಾಲಾಳು ಪಡೆಗಳು ಬಂದು ಸೇರಿದವು. ವಾದ್ಯದ ಮೊಳಗಿನಲ್ಲಿ ಯುದ್ಧಕ್ಕೆ ಹೊರಡಲು ಸಿದ್ಧನಾದನು. ಹಿಂದೆ ನಿಷಧ ಪತಿ ಕಾಳಗದಲ್ಲಿ ಬಳಸುತ್ತಿದ್ದ ಧರ್ಮ ಗಹಳೆಯನ್ನು ತೆಗೆಸಿದನು. ಕೋಪಾಗ್ನಿಯಲ್ಲಿ ಕುದಿಯುತ್ತ ಅವನು ಮಂತ್ರಿ ಮಾನ್ಯರೊಡನೆ,

'ಇಂದು ಶತ್ರುಗಳಿಗೆ ಜಯವಾಗಿದೆ. ಇನ್ನು ನಾನು ಹೋಗಿ ಆ ವಿರೋಧಿಗಳನ್ನು ಹಿಮ್ಮೆಟ್ಟಿಸುವೆ' ಎಂದು ಹೇಳಿದನು. ಆಗ ಮಂತ್ರಿಯು ಕೈಮುಗಿದು ಹೀಗೆ ಬಿನ್ನವಿಸಿದನು:

